# <u>ಕರ್ನಾಟಕ ವಿಧಾನ ಪರಿಷತ್ತು</u>

| | |
|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:** | 2884/2022 |
| **ಸದಸ್ಯರ ಹೆಸರು:** | ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ) |
| **ಉತ್ತರಿಸಬೇಕಾದ ದಿನಾಂಕ:** | 30.03.2022 |
| **ಉತ್ತರಿಸಬೇಕಾದ ಸಚಿವರು:** | ಕಂದಾಯ ಸಚಿವರು |

| <u>ಕ್ರ. ಸಂ</u> | <u>ಪ್ರಶ್ನೆ</u> | <u>ಉತ್ತರ</u> |
|---|---|---|
| ಅ | ಕಂದಾಯ ಇಲಾಖೆಯಿಂದ ಕಾರವಾರ ಜಿಲ್ಲಾಧಿಕಾರಿಯವರಿಗೆ ನೀಡಿರುವ ಪತ್ರ ಸಂ. ಆರ್.ಡಿ/113/ಎಎಸ್‌ಡಿ 2019, ದಿನಾಂಕ:04.04.2019ರ ಸಾರಾಂಶವೇನು; | ಶ್ರೀ ದಯಾನಂದ ಕೃಷ್ಣ ಮೇಸ್ತ, ತಹಶೀಲ್ದಾರ್, ಗ್ರೇಡ್-2 ಇವರ ಹಕ್ಕಿನಲ್ಲಿ ಬಾಕಿ ಇರುವ 193 ದಿನಗಳ ಗಳಿಕೆ ರಜೆಯ ನಗದೀಕರಣ ಮಂಜೂರಾತಿ ಆದೇಶವನ್ನು ಕಳುಹಿಸುವಂತೆ ಮಹಾಲೇಖಪಾಲರು ದಿನಾಂಕ:29.01.2019ರ ಪತ್ರದಲ್ಲಿ ಸರ್ಕಾರವನ್ನು ಕೋರಿರುವ ಹಿನ್ನೆಲೆಯಲ್ಲಿ, ಸದರಿ ಅಧಿಕಾರಿಯ ವಿರುದ್ಧ ಯಾವುದಾದರೂ ಇಲಾಖಾ ವಿಚಾರಣೆ ಬಾಕಿ ಇದೆಯೇ ಅಥವಾ ಹೂಡಲು ಉದ್ದೇಶಿಸಿದೆಯೇ ಹಾಗೂ ಸದರಿಯವರಿಂದ ಸರ್ಕಾರಕ್ಕೆ ಯಾವುದಾದರೂ ಬಿ-ಬಾಕಿ ಇದೆಯೇ ಎಂಬ ಮಾಹಿತಿಯನ್ನು ಪಡೆಯಲು ಜಿಲ್ಲಾಧಿಕಾರಿ, ಉತ್ತರ ಕನ್ನಡ ಜಿಲ್ಲೆ, ಕಾರವಾರ ಇವರಿಗೆ ದಿನಾಂಕ:04.04.2019ರ ಪತ್ರದಲ್ಲಿ ಮಾಹಿತಿ ಕೋರಲಾಗಿತ್ತು. ಸದರಿ ಪತ್ರದ ಪ್ರತಿಯನ್ನು ಅನುಬಂಧ-ಎ ರಲ್ಲಿ ಲಗತ್ತಿಸಿದೆ. |
| ಆ | ಸದರಿ ಪತ್ರಕ್ಕೆ ಅನುಗುಣವಾಗಿ ಕಾರವಾರ ಜಿಲ್ಲಾಧಿಕಾರಿಗಳ ಪತ್ರ ಸಂಖ್ಯೆ: ಕಂದಾ/ಸಿಬ್ಬಂದಿ(1)ವಿವ 118/2016-173.2.0.1433, ದಿನಾಂಕ:21.08.2019ರ ಪತ್ರದ ಮೇಲೆ ಕಂದಾಯ ಇಲಾಖೆಯವರು ಕೈಗೊಂಡಿರುವ ಕ್ರಮಗಳೇನು: | ಜಿಲ್ಲಾಧಿಕಾರಿ, ಉತ್ತರ ಕನ್ನಡ ಜಿಲ್ಲೆ, ಕಾರವಾರ ಇವರಿಂದ ಬಂದಿರುವ ಮಾಹಿತಿಯನ್ನು ಪರಿಶೀಲಿಸಿ, ಶ್ರೀ ದಯಾನಂದ ಕೃಷ್ಣ ಮೇಸ್ತ, ತಹಶೀಲ್ದಾರ್, ಗ್ರೇಡ್-2 ಇವರ ವಿರುದ್ಧ ಯಾವುದೇ ವಿಚಾರಣೆ ಬಾಕಿ ಇರುವುದಿಲ್ಲ ಎಂಬ ಅಂಶಗಳನ್ನು ಪರಿಗಣಿಸಿ, ಸರ್ಕಾರದ ಅಧಿಸೂಚನೆ ಸಂಖ್ಯೆ: ಆರ್‌ಡಿ 113 ಎಎಸ್‌ಡಿ 2019, ದಿನಾಂಕ:27.12.2019ರಲ್ಲಿ, ಶ್ರೀ ದಯಾನಂದ ಕೃಷ್ಣ ಮೇಸ್ತ, ತಹಶೀಲ್ದಾರ್, ಗ್ರೇಡ್-2 ಇವರ ಹಕ್ಕಿನಲ್ಲಿರುವ 193 ದಿನಗಳ ಗಳಿಕೆ ರಜೆಯನ್ನು ನಗದೀಕರಿಸಲು ಕೆ.ಸಿ.ಎಸ್.ಆರ್. ನಿಯಮಗಳು, 1957ರ ನಿಯಮ 118(ಎ)(1) ಮತ್ತು 118(ಎ)(4)ರನ್ವಯ ಮಂಜೂರು ಮಾಡಿ ಆದೇಶಿಸಿ, ಸದರಿ ಆದೇಶದಂತೆ ಸೂಕ್ತ ಕ್ರಮ ಕೈಗೊಳ್ಳಲು ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು ಇವರಿಗೆ ಕಳುಹಿಸಿದೆ. ಸದರಿ ಪ್ರತಿಯನ್ನು ಜಿಲ್ಲಾಧಿಕಾರಿಗಳು, ಉತ್ತರ ಕನ್ನಡ ಜಿಲ್ಲೆ, ಕಾರವಾರ ಮತ್ತು ಶ್ರೀ ದಯಾನಂದ ಕೃಷ್ಣ ಮೇಸ್ತ, ತಹಶೀಲ್ದಾರ್, ಗ್ರೇಡ್-2 ಇವರಿಗೂ ಕಳುಹಿಸಲಾಗಿದೆ. ಜಿಲ್ಲಾಧಿಕಾರಿಯವರ ದಿನಾಂಕ:21.08.2019ರ ಪತ್ರವನ್ನು ಅನುಬಂಧ-ಬಿ ಮತ್ತು ಸರ್ಕಾರದ ಅಧಿಸೂಚನೆ ಸಂಖ್ಯೆ: ಆರ್‌ಡಿ 113 ಎಎಸ್‌ಡಿ 2019, ದಿನಾಂಕ:27.12.2019 ನ್ನು ಅನುಬಂಧ-ಸಿ ನಲ್ಲಿ ಲಗತ್ತಿಸಿದೆ. |

| | | |
|---|---|---|
| ಇ | ತಹಶೀಲ್ದಾರ್ ಗ್ರೇಡ್-2 ಆಗಿ ಸೇವೆ ಸಲ್ಲಿಸಿ ಸ್ವಯಂ ನಿವೃತ್ತಿಗೊಂಡ ಅಧಿಕಾರಿಗಳಿಗೆ ಲಭಿಸಬೇಕಾದ ನಿವೃತ್ತಿ ನಂತರ ಡಿಸಿಆರ್‌ಜಿ. ರಜಾ ನಗಧೀಕರಣ ಸೌಲಭ್ಯ ಮುಂತಾದ ಸೌಲಭ್ಯಗಳನ್ನು ನಿವೃತ್ತಿಯಾಗಿ 5 ವರ್ಷ ಕಳೆದರು ಲಭಿಸದಿರುವ ಗಂಭೀರ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ: | ಪ್ರಕರಣಕ್ಕೆ ಸಂಬಂಧಿಸಿದಂತೆ ಕಂದಾಯ ಇಲಾಖೆಯಿಂದ ಸೂಕ್ತ ಕ್ರಮವಹಿಸಲಾಗಿದೆ ಮತ್ತು ಇಂತಹ ಯಾವುದೇ ಪ್ರಕರಣಗಳು ಸರ್ಕಾರದಲ್ಲಿ ಸ್ವೀಕೃತಗೊಂಡಿರುವುದಿಲ್ಲ ಮತ್ತು ಸ್ವೀಕೃತಗೊಂಡಲ್ಲಿ ತಕ್ಷಣ ಕ್ರಮವಹಿಸಲಾಗುತ್ತದೆ. |
| ಈ | ಬಂದಿದ್ದಲ್ಲಿ, ಇಂತಹ ವಿಳಂಬ ಧೋರಣೆಯನ್ನು ಅನುಸರಿಸುತ್ತಿರುವ ಅಧಿಕಾರಿ/ ನೌಕರರ ಮೇಲೆ ಕಠಿಣ ಕ್ರಮ ಜರುಗಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ? | ಅನ್ವಯಿಸುವುದಿಲ್ಲ. |

ಕಡತ ಸಂ: ಇ-ಕಂಇ 139 ಎಎಸ್‌ಡಿ 2022

[ಆರ್. ಅಶೋಕ]
ಕಂದಾಯ ಸಚಿವರು.